


'ಹೌದಾ'

'ಅಷ್ಟು ಸಣ್ಣ ಮಗುವನ್ನು ಹೇಗೆ ಮನಸ್ಸು ಬಂತು?'

'ನಿನಗೆ ಯಾರು ಹೇಳಿದರು?'

'ಆ ಮಗುವಿನ ಅಮ್ಮ' ಎಂದು ದೂರದಲ್ಲಿ ಕುಳಿತಿದ್ದ ಹಳೆ ಸೀರೆ ತೊಟ್ಟ ಸಪೂರದ ಹೆಂಗಸೊಬ್ಬರು ದೀನವಾಗಿ ಆಕಾಶ ನೋಡುತ್ತಾ ಕುಳಿತಿದ್ದನ್ನು ತೋರಿಸಿದಳು.

ನನ್ನ ಕರುಳು ಚುರ್ ಅಂದಿತು.

'ಯಾರಂತೆ?...ಪೊಲೀಸ್‌ಗೆ ಕಂಪ್ಲೇಟ್ ಕೊಡ್ಲಿಲ್ವಾ?'

'ಹೇಯ್ ಮೆತ್ತಗೆ ಮಾತನಾಡಿ... ಅವ್ರು ಯಾರ ಬಳಿಯೂ ಹೇಳಿಲ್ಲ. ನೀವ್ಯಾಕೆ ಅಷ್ಟು ಜೋರಾಗಿ ಹೇಳಿ ಮರ್ಯಾದಿ ಕಳೀತಿರಾ?'

ಅವಳು ಖಾರವಾಗಿ ಎಚ್ಚರಿಸಿದಳು.

'ಪಾಪ ಅಲ್ಲಿ ಮಗು ಒಬ್ಬನೇ ಮಲಗಿದ್ದಾನೆ. ನಾನು ಹೊರಡುತ್ತೇನೆ' ಎಂದು ಮಾತು ಮುಗಿಸಿ ಅವಳು ಪಿಐಸಿಯುವಿನ ಬಾಗಿಲು ದಾಟಿ ಒಳ ಹೋದಳು.

ಈಗ ನಾನು ವರಾಂಡದ ಕಬ್ಬಿಣದ ನೀಳ ಕುರ್ಚಿನಲ್ಲಿ ಕುಳಿತು ಸುಮ್ಮನೆ ಯೋಚಿಸುತ್ತಿದ್ದೆ. ನೂರಾರು ನನ್ನಂತಹ ತಂದೆ- ತಾಯಂದಿರು ಆಸ್ಪತ್ರೆ ಒಳ- ಹೊರಗೂ ಶತಪಥ ಹೆಜ್ಜೆಯನಿಡುತ್ತಿದ್ದರು. ಅವರ ಮುಖದಲ್ಲೆಲ್ಲಾ ಮನೆಯ ಹೂದೋಟ ಬಾಡಿ ಹೋದ ಮೋಡ ತುಂಬಿತ್ತು. ಮಳೆಯಾಗಲೂಬಹುದು- ತಿಳಿಯಾಗಲೂಬಹುದು.

* * *